<u>ದಿನಾಂಕಃ 11.10.2023 ರಂದು ಪ್ರಮಾಣ ವಚನ ಭೋದಿಸಲಾಯಿತುಃ</u>

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ ಃ</u>**

ನಾನು ಡಿಪ್ಲೋಮ ಓದಿರುತ್ತೇನೆ. ನಾನು ಬೊಮ್ಮಸಂದ್ರದಲ್ಲಿ ಕೆಲಸ ಮಾಡುತ್ತೇನೆ. ಈ ದಾವೆಯನ್ನು 2 ಸ್ವತ್ತಿಗೆ ಹಾಕಲಾಗಿದೆ. ದಾವಾ ಸ್ವತ್ತು ಸ.ನಂ. 87/ಪಿ2 ಮತ್ತು 58/13 2 ಗುಂಟೆ. ದಾವಾ ಸ್ವತುತ್ತಗಳು ನನ್ನ ತಾತನಿಗೆ ಸೇರಿದೆ. ನನ್ನ ತಾತನ ಹೆಸರು ಕೋಟೆ ಸುಬ್ಬೇಗೌಡ ಮತ್ತು ಕ್ಯಾಟೇ ಸುಬ್ಬೇಗೌಡ ಎನ್ನುತ್ತಾರೆ. ನನ್ನ ತಾತನ ತಂದೆಯ ಹೆಸರು ತಿಮ್ಮರಾಯಗೌಡ. ಕೋಟೆ ಸುಬ್ಬೇಗೌಡ/ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರ ವಾರಸುದಾರರು ವಾದಿಗಳು ಎಂದು ತೋರಿಸಲು ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಮಾಡಿರುತ್ತೇವೆ, ವಂಶವೃಕ್ಷವನ್ನು ಹಾಜರುಪಡಿಸಿರುತ್ತೇನೆ. ವಂಶವೃಕ್ಷವನ್ನು ಹಾಜರುಪಡಿಸದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮುನ್ನ ಚಾಲ್ತಿ ದಾವೆಯು ಜೂನಿಯರ್ ಡಿವಿಶನ್‌ನಲ್ಲಿ ದಾವೆ ಒಎಸ್ 329/2013 ದಾವೆಯನ್ನು ಹಾಕಿದ್ದು, ಅದು ಜ್ಯೂರಿಸ್‌ಡಿಕ್ಷನ್ ಆಧಾರದ ಮೇಲೆ ಸದರಿ ಈ ನ್ಯಾಯಾಲಯಕ್ಕೆ ವರ್ಗಾವಣೆ ಆಗಿದೆ ಎಂದರೆ ಹೌದು. ಒಎಸ್ 329/2013 ಅನ್ನು ಹಾಕಿದ ಕಾಲಕ್ಕೆ ದಾವಾ 1 ಮತ್ತು 2ನೇ ಸ್ವತ್ತಿನ ಖಾತೆ ಸುಬ್ಬೇಗೌಡ ಬಿನ್ ತಿಮ್ಮರಾಯಗೌಡ ಹೆಸರಿಗೆ ಬರುತ್ತಿತ್ತು ಎಂದರೆ ಹೌದು. ದಾವಾ ಸ್ವತ್ತು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರಿಗೆ ಗ್ರ್ಯಾಂಟ್ ಆಗಿದೆ. ಅದು ನನ್ನ ತಾತನಿಗೆ ಗ್ರ್ಯಾಂಟ್ ಆಗಿದೆ, ಯಾವಾಗ ಆಯಿತು ಎಂದು ಗೊತ್ತಿಲ್ಲ. ಅದರ ಬಗ್ಗೆ ದಾಖಲಾತಿಗಳಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ, ಹಿಂಬರಹ ನೀಡಿರುತ್ತಾರೆ. ಗ್ರ್ಯಾಂಟ್ ದಾಖಾಲಾತಿ

ಹೊರತುಪಡಿಸಿ ಉಳಿಕೆ ರೆವಿನ್ಯೂ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಹೌದು. ದಾವಾ 1ನೇ ಸ್ವತ್ತು ಇಲ್ಲಿಯವರೆಗೂ ನಮ್ಮ ಕುಟುಂಬದವರಿಗೆ ಸೇರಿದೆ ಎಂದು ಹಕ್ಕು ದಾಖಲಾತಿಯನ್ನು ಏನಾದರೂ ಹಾಜರುಪಡಿಸಿರುತ್ತೀರಾ ಎಂದರೆ ಹೌದು. ದಾವಾ ಸ್ವತ್ತಿಗೆ ವಾದ ಪತ್ರದಲ್ಲಿ ಚಕ್ಕುಬಂಧಿ ತೋರಿಸಿದ್ದು , ಅದೇ ರೀತಿ ಚಕ್ಕುಬಂದಿ ಬರುತ್ತದೆ ಎಂದು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು.

ಪ್ರತಿವಾದಿಗಳು ಸಲ್ಲಿಸಿರುವ ತಕರಾರನ್ನು ತಿಳಿದುಕೊಂಡಿರುತ್ತೀರಾ ಎಂದರೆ ಹೌದು. ವಾದಿಗಳು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡರವರ ವಾರಸುದಾರರು ಅಲ್ಲ ಎಂದು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸುಬೇಗೌಡ ಬಿನ್ ತಿಮ್ಮರಾಯಗೌಡ ಯಾವಾಗ ಮೃತಪಟ್ಟರು ಆ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಕಿರುತ್ತೀರಾ ಎಂದರೆ ಹೌದು. ಯಾವಾಗ ಸುಬ್ಬೇಗೌಡ ಬಿನ್ ತಿಮ್ಮರಾಯಗೌಡ ಮೃತಪಟ್ಟರು ಎಂದು ನಿಖರವಾಗಿ ಆಗಿ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಟಿ. ಬಾಬು ಅಲಿಯಾಸ್ ತಿಮ್ಮರಾಯಪ್ಪ - 5ನೇ ವಾದಿ ನನ್ನ ಅಣ್ಣ. ನಮ್ಮ ಊರಿನ ಭಜಂತ್ರಿ ಜಾತಿಗೆ ಸೇರಿದ ರಾಮಪ್ಪ ಮತ್ತು ಆತನ ಮಕ್ಕಳು- ಮರಿಸ್ವಾಮಿ ನನಗೆ ಗೊತ್ತೆ? ಎಂದರೆ ಹೌದು. ನನ್ನ ಅಣ್ಣ 5ನೇ ವಾದಿ- ಟಿ. ಬಾಬು ಅಲಿಯಾಸ್ ತಿಮ್ಮರಾಯಪ್ಪರವರು ಈ ಮೇಲೆ ಹೇಳಿದ ರಾಮಪ್ಪ ಮತ್ತು ಮರಿಸ್ವಾಮಿ ಕಡೆಯಿಂದ ಸೈಟ್ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಹೌದು, ಸಾಕ್ಷಿಗೆ ಅದರ ಕ್ರಯ ಪತ್ರವನ್ನು ತೋರಿಸಿದ್ದು ಅದನ್ನು ಸಾಕ್ಷಿಯು ಒಪ್ಪಿಕೊಂಡ ಕಾರಣ ಅದನ್ನು ಕನ್‌ಪ್ರಂಟ್ ಆಗಿ ನಿಡಿ-1

ಎಂದು ಗುರುತಿಸಲಾಯಿತು. ನಿಡಿ-1ರಲ್ಲಿರುವ ಸ್ವತ್ತು ಮೂಲತಃ ರಾಮಪ್ಪರವರಿಗೆ ಸೇರಿದ ಸ್ವತ್ತು ಆಗಿರುತ್ತದೆ. ದಿಃ 24.12.1975ರಲ್ಲಿ ನಿಡಿ-1ರಲ್ಲಿರುವ ಸ್ವತ್ತನ್ನು ನನ್ನ ತಂದೆ ರಾಮಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 24.12.1975ರಲ್ಲಿ ಆದ ಕ್ರಯ ಪತ್ರದಲ್ಲಿ ರಾಮಪ್ಪರವರಿಗೆ ಸುಬ್ಬೇಗೌಡರ ಮಗ ಸುಮಾರು 40 ವಯಸ್ಸುಳ್ಳ ತಿಮ್ಮರಾಯಪ್ಪ ಯಾರು ಎಂದು ಕೇಳಲಾಗಿ ನನ್ನ ತಂದೆ ಎನ್ನುತ್ತಾರೆ, ಆ ಕಾರಣ ಅದನ್ನು ಕನ್‌ಫ್ರಂಟ್ ಆಗಿ ನಿಡಿ-2 ಮತ್ತು ನಿಡಿ-2ಎ ಎಂದು ಗುರುತಿಸಲಾಯಿತು. ನಿಡಿ-1ರಲ್ಲಿ ಮಾರಾಟ ಮಾಡಿದ ಸ್ವತ್ತನ್ನು ನನ್ನ ಅಣ್ಣ ಖರೀದಿ ಮಾಡಿದ್ದು, ಸದರಿ ಮಾರಾಟ ಮಾಡಿದ ವ್ಯಕ್ತಿ ರಾಮಪ್ಪ ಆಗಿದ್ದು, ಸದರಿ ರಾಮಪ್ಪ ಸದರಿ ನಿಡಿ-1ರಲ್ಲಿರುವ ಆಸ್ತಿಯನ್ನು ನನ್ನ ತಂದೆ ತಿಮ್ಮರಾಯಪ್ಪ ಬಿನ್ ಕೋಟೆ ಸುಬ್ಬೇಗೌಡರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1975ರಲ್ಲಿ ನನ್ನ ತಂದೆ ರಾಮಪ್ಪರವರಿಗೆ ಮಾರಾಟ ಮಾಡಿದ್ದು, ಆ ಸದರಿ ಸ್ವತ್ತು ನನ್ನ ತಂದೆಗೆ ನನ್ನ ತಾತನಿಂದ ಬಂದ ಸ್ವತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-1ರಲ್ಲಿರುವ ಸ್ವತ್ತನ್ನು ನನ್ನ ಅಣ್ಣ ಖರೀದಿ ಮಾಡಿದ್ದು, ಅದು ಮೂಲತಃ ನನ್ನ ತಾತನ ಸ್ವತ್ತು ಎಂದರೆ ಗೊತ್ತಿಲ್ಲ. ನನ್ನ ತಾತ ನಿಡಿ-1ರಲ್ಲಿರುವ ಸ್ವತ್ತನ್ನು ದಿಃ 27.10.1930ರಲ್ಲಿ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಆ ಬಗ್ಗೆ ದಾಖಲಾತಿ ಇಲ್ಲ. ದಿಃ 27.10.1930ರಲ್ಲಿ ನನ್ನ ತಾತ ಸುಬ್ಬಪ್ಪ ಅಲಿಯಾಸ್ ಸುಬ್ಬೇಗೌಡ ಅವರ ತಂದೆಯ ಹೆಸರು ಸದರಿ ಕ್ರಯ ಪತ್ರದಲ್ಲಿ ಕೋಟೆ ನಂಜಪ್ಪ ಎಂದು ನಮೂದು ಆಗಿದೆ,

ಆದರೆ ನಾನು ಹೇಳಿದಂತೆ ನನ್ನ ತಾತನ ಹೆಸರು ಸುಬ್ಬೇಗೌಡ ಬಿನ್ ತಿಮ್ಮರಾಯಗೌಡ ಅಲ್ಲ ಎಂದರೆ ಸರಿ.

ಸ.ನಂ 73/2ರಲ್ಲಿ 39 ಗುಂಟೆ, ಸ.ನಂ 75/2ರಲ್ಲಿ 21 ಗುಂಟೆ, ಸ.ನಂ. 80/2ರಲ್ಲಿ 1 ಎಕರೆ 15 ಗುಂಟೆ, ಸ.ನಂ. 81/1ರಲ್ಲಿ 1 ಎಕರೆ 22 ಗುಂಟೆ, ಸ.ನಂ. 106 ರಲ್ಲಿ 2 ಎಕರೆ 12 ಗುಂಟೆ, ಸ.ನಂ 122/2ರಲ್ಲಿ 13 ಗುಂಟೆ, ಸ.ನಂ 179/1ರಲ್ಲಿ 1 ಎಕರೆ 39 ಗುಂಟೆ ಎಂದು ಈ ಮೇಲೆ ಹೇಳಿದ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಸೇರಿದೆ ಎಂದರೆ ಹೌದು. ಈ ಮೇಲೆ ಹೇಳಿದ ಸ್ವತ್ತುಗಳನ್ನು ನನ್ನ ತಂದೆ ದಿಃ 03.10.1962ರಲ್ಲಿ ಅರಳ್ಳಿ ವೆಂಕಟೇಗೌಡರಿಂದ ಖರೀದಿ ಮಾಡಿದ್ದರು ಎಂದರೆ ಹೌದು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದು ಈ ಮೇಲೆ ಹೇಳಿದ ಸ್ವತ್ತುಗಳ ಕ್ರಯ ಪತ್ರ ಎಂದರೆ, ಅದನ್ನು ನೋಡಿ ಓದಿ ಒಪ್ಪಿಕೊಂಡಿರುತ್ತಾರೆ, ಸದರಿ ಕ್ರಯ ಪತ್ರವನ್ನು ಕನ್‌ಫ್ರಂಟ್ ಆಗಿ ನಿಡಿ-3 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

ಸಹಿ/-

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.